


■ ಡಾ. ಎಂ.ವೆಂಕಟಸ್ವಾಮಿ



## ಎಂಜಿನಿಯರಿಂಗ್ ಸೇರಿದ ತೇಜಸ್, ದಮಯಂತಿ

ಮಕ್ಕಳು ಚಿಕ್ಕವರಾಗಿದ್ದಾಗ ನನ್ನ ತಾಯಿ ಎರಡು ಮೂರು ವರ್ಷಗಳ ಕಾಲ ನಮ್ಮ ಜೊತೆಗೆ ಇದ್ದುಬಿಟ್ಟಿದ್ದಳು. ದೊಡ್ಡವರಾಗುತ್ತಾ ಹೋದಂತೆ ಮಕ್ಕಳು ಕಾಯಿಲೆ ಕಸರುಗಳಿಗೆ ಪ್ರತಿರೋಧ ಬೆಳೆಸಿಕೊಂಡು ಗಟ್ಟಿಮುಟ್ಟಾಗಿ ಬೆಳೆಯುತ್ತಿದ್ದರು. ತೇಜಸ್ ಮತ್ತು ದಮಯಂತಿ ಇಬ್ಬರೂ ನನ್ನ ಮತ್ತು ಸಾವಿತ್ರಿಯ ಅಂಗಾಂಗಗಳನ್ನು ಅರ್ಧರ್ಧ ಹಂಚಿಕೊಂಡವರಂತೆ **best out of us** ಪಡೆದುಕೊಂಡವರಂತೆ ನೋಡಲು ಚೆನ್ನಾಗಿ ಕಾಣುತ್ತಿದ್ದರು. ಕೆಲವೊಮ್ಮೆ ನನಗೆ ಅವರ ಮೇಲೆ ನನ್ನ ದೃಷ್ಟಿಯೇ ಬೀಳುತ್ತದೊ ಏನೊ ಎಂಬಂತೆ ಅನಿಸುತ್ತಿತ್ತು. ಅದನ್ನು ನಿವಾರಿಸಲು ಸಾವಿತ್ರಿ ಇಬ್ಬರನ್ನು ನಿಲ್ಲಿಸಿ, ಇಲ್ಲ ಕೂರಿಸಿ ಆಗಾಗ ಪೊರಕೆ ಕಡ್ಡಿಗಳನ್ನು ನೀವಾಳಿಸಿ ಸುಡುವುದುರಿಂದ, ಇಲ್ಲ ಮೆಣಸಿನ ಕಾಯಿಗಳನ್ನು ನೀವಾಳಿಸಿ ಬೆಂಕಿಯಲ್ಲಿ ಹಾಕಿ ಸುಟ್ಟು ಮಕ್ಕಳಿಗೆ ದೃಷ್ಟಿ ತೆಗೆಯುತ್ತಿದ್ದಳು. ನನ್ನ ತಾಯಿ ಬಂದರಂತೂ ವಾರಕ್ಕೆ ಎರಡು ಸಲವಾದರೂ ಆ ಕೆಲಸವನ್ನು ಮಾಡುತ್ತಿದ್ದರು. ಅದನ್ನೇ ಸಾವಿತ್ರಿಯೂ ಕಲಿತುಕೊಂಡಿದ್ದಳು. ಪೊರಕೆ ಕಡ್ಡಿಗಳು ಮತ್ತು ಮೆಣಸಿನ ಕಾಯಿಗಳು ಬೆಂಕಿಯಲ್ಲಿ ಪಟಪಟ ಎಂದು ಸದ್ದು ಮಾಡಿದರೆ 'ನೋಡು ಎಷ್ಟು ದೃಷ್ಟಿಯಾಗಿದೆ ಮಕ್ಕಳಿಗೆ, ಯಾರ ಕಣ್ಣುಗಳೊ?'